# ಕನ್ನಡ ಪೋಸ್ಟ್

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 262 | Pages. 2 | Date: 02-09-2025, TUESDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 262 – ಪುಟಗಳು : 2 | 02-09-2025 ಮಂಗಳವಾರ | Ph: 8762954248 | ದರ : ₹1


# ಕಾದು ನೋಡಿ ಏನು ಅಂತ ತೋರಿಸ್ತಿನಿ

## ವಿರೋಧಿಗಳಿಗೆ ಮಾಜಿ ಸಚಿವ ರೇವಣ್ಣ ಎಚ್ಚರಿಕೆ | ಹಾಮೂಲ್ ವಾರ್ಷಿಕ ಸಭೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕೆಲವರು ರೇವಣ್ಣನ ಕಾಲ ಮುಗೀತು ಅಂತಾರೆ. ಕಾದು ನೋಡಿ, ನಮಗೂ ಕಾಲ ಬರುತ್ತದೆ. ರೇವಣ್ಣ, ಕುಮಾರಣ್ಣ, ಹೆಚ್.ಡಿ. ದೇವೇಗೌಡರು ಅಂದರೆ ಏನಂತ ತೋರಿಸುತ್ತೇನೆ ಎಂದು ಹಾಮೂಲ್ ಅಧ್ಯಕ್ಷ ಹಾಗೂ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಗುಡುಗಿದರು.

ನಗರದ ಹಾಮೂಲ್ ಆವರಣದಲ್ಲಿ ಸೋಮವಾರ ನಡೆದ ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ 2024-25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಎಲ್ಲದಕ್ಕೂ ಕಾಲ ಕೂಡಿ ಬರುತ್ತದೆ. ಈ ಡೇರಿ ನಿರ್ಮಾಣ ಸಂದರ್ಭದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರಿಗೆ ಎಷ್ಟು ಕಾಟ ಕೊಟ್ಟರು ಎಂಬುದು ಜನರಿಗೆ ಗೊತ್ತಿದೆ. ರೇವಣ್ಣನ ಕಾಲ ಮುಗಿಯಿತೆಂದು ಹೊರ ಜಿಲ್ಲೆಯ ರಾಜಕಾರಣಿಗಳು ತಿಳಿದಿದ್ದರೆ ಏನು ಅಂತ ತೋರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

### ನಂಬರ್ 1 ಗುರಿ

ಹಾಲು ಸಂಗ್ರಹದಲ್ಲಿ ಬೆಂಗಳೂರು ನಂತರ ಎರಡನೇ ಸ್ಥಾನದಲ್ಲಿರುವ ಹಾಸನ ಮುಂದಿನ ಮೂರು ವರ್ಷಗಳಲ್ಲಿ ಮೊದಲ ಸ್ಥಾನ ಪಡೆಯುವ ಗುರಿ ಹಾಕಿಕೊಳ್ಳಲಾಗಿದೆ. ನಿತ್ಯ 14.30 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು ಅದನ್ನು 20 ರಿಂದ 25 ಲಕ್ಷ ಲೀಟರ್‌ಗೆ ಹೆಚ್ಚಿಸಬೇಕಿದೆ. ಅದಕ್ಕಾಗಿ ಹೈನುಗಾರರು, ಸಂಘದ ನಿರ್ದೇಶಕರು ಹಾಗೂ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕೆಂದು ಸೂಚನೆ ನೀಡಿದರು. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಬದುಕಿರುವಾಗಲೇ ಅಭಿವೃದ್ಧಿಯಲ್ಲಿ ಹಾಸನ ರಾಜ್ಯದ ನಂಬರ್ ಒನ್ ಜಿಲ್ಲೆಯಾಗಬೇಕೆಂಬುದು ನನ್ನ ಧ್ಯೇಯ. ಆ ನಿಟ್ಟಿನಲ್ಲಿ ಈಗಾಗಲೇ ಸಾಕಷ್ಟು ಕೆಲಸ ಮಾಡಿದ್ದೇನೆ. ದಕ್ಷಿಣ ಭಾರತದಲ್ಲೇ ಅತ್ಯುತ್ತಮ ಡೇರಿ ಎಂಬ ಪ್ರಶಂಸೆಗೆ ಹಾಮೂಲ್ ಪಾತ್ರವಾಗಿದೆ. 250 ಖಾಲಿ ಹುದ್ದೆಗಳಿದ್ದರೂ ಖರ್ಚು ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಭರ್ತಿ ಮಾಡಿಲ್ಲ. ಇರುವ ಸಿಬ್ಬಂದಿಯೇ ಒತ್ತಡದ ನಡುವೆ ಕೆಲಸ ಮಾಡುತ್ತಿದ್ದಾರೆ. 20 ಕೋಟಿ ರೂ. ವೆಚ್ಚದಲ್ಲಿ ಕೊಡಗು ಡೇರಿಯನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ಹಾಸನದಲ್ಲಿ ವಿಮಾನ ನಿಲ್ದಾಣ ನಿರ್ಮಿಸಬೇಕೆಂದು ಸಾವಿರ ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಯಿತು. ಅದರಲ್ಲಿ 220 ಎಕರೆ ಸರ್ಕಾರಿ ಜಮೀನಿದ್ದು ಅದನ್ನು ಕಬಳಿಸಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಸೋಮನಹಳ್ಳಿ ಕಾವಲಿನಲ್ಲಿ 440 ಎಕರೆಯಲ್ಲಿ 160 ಕೋಟಿ ರೂ. ವೆಚ್ಚದಲ್ಲಿ ತೋಟಗಾರಿಕಾ ಮಹಾವಿದ್ಯಾಲಯ ತೆರೆಯಲು ಹೆಚ್.ಡಿ. ಕುಮಾರಸ್ವಾಮಿ ಅವರ ಸರ್ಕಾರದ ಅವಧಿಯಲ್ಲಿ ನಿರ್ಧರಿಸಲಾಗಿತ್ತು. ನಂತರ ಅಧಿಕಾರಕ್ಕೆ ಬಂದ ಸರ್ಕಾರ ಅದಕ್ಕೆ ಕೊಕ್ಕೆ ಹಾಕಿತು. 250 ಕೋಟಿ ರೂ. ವೆಚ್ಚದಲ್ಲಿ ವೈದ್ಯಕೀಯ ಕಾಲೇಜು ನಿರ್ಮಿಸಿದ್ದೇನೆ. ಹೊಸ ಬಸ್ ನಿಲ್ದಾಣ, ಆಸ್ಪತ್ರೆ, ರಾಷ್ಟ್ರೀಯ ಹೆದ್ದಾರಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹೀಗೆ ಎಲ್ಲಾ ಕೆಲಸ ಮಾಡಿದ್ದೇನೆ. ಇವರು ಬಂದು ನಾನು ಕಟ್ಟಿಸಿದ ಕಟ್ಟಡಗಳನ್ನು ಉದ್ಘಾಟಿಸಿ ಹೋಗುತ್ತಾರೆಂದು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಹಾಮೂಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಸಂಘದ ನಿರ್ದೇಶಕರಾದ ಸತೀಶ್ ಹೊನ್ನವಳ್ಳಿ, ನಾರಾಯಣ, ರಾಮಚಂದ್ರ, ಸ್ವಾಮಿಗೌಡ, ಹೆಚ್.ಎಸ್. ಬಸವರಾಜ, ನಿಂಗರಾಜು, ಹೆಚ್.ಡಿ. ಸುನಾಲ್, ಹೆಚ್.ಟಿ. ಆಶಾ, ವಸಂತ, ಎಂ.ಎಸ್. ಸತೀಶ್ ಕುಮಾರ್, ಕೆ.ಎಸ್. ಮಂಜೇಗೌಡ ಮತ್ತಿತರರಿದ್ದರು.



### ಫೆಬ್ರವರಿಗೆ ಮೆಗಾ ಡೇರಿ ಉದ್ಘಾಟನೆ

ನಗರದ ಕೈಗಾರಿಕಾ ಪ್ರದೇಶದ 66 ಎಕರೆ ಪ್ರದೇಶದಲ್ಲಿ 735 ಕೋಟಿ ರೂ. ವೆಚ್ಚದ 10 ಲಕ್ಷ ಲೀಟರ್ ಸಾಮರ್ಥ್ಯದ ಮೆಗಾ ಡೇರಿ ನಿರ್ಮಾಣ ಹಾಗೂ 60 ಮೆಟ್ರಿಕ್ ಟನ್ ಹಾಲಿನ ಪುಡಿ ಘಟಕ ನಿರ್ಮಾಣ ಕಾಮಗಾರಿ, ಯಂತ್ರೋಪಕರಣಗಳ ಪೂರೈಕೆ ಮತ್ತು ಅಳವಡಿಕೆ ಕೆಲಸ ಬಹುತೇಕ ಪೂರ್ಣಗೊಂಡಿದೆ. 2026 ಜನವರಿ ಅಥವಾ ಫೆಬ್ರವರಿಯಲ್ಲಿ ಕಾರ್ಯಾರಂಭ ಮಾಡಲಿದೆ. ಉದ್ಘಾಟನೆಗೆ ಪ್ರಧಾನಿ ಅಥವಾ ಕೇಂದ್ರದ ಮಂತ್ರಿಗಳಿಗೆ ಆಹ್ವಾನ ನೀಡುವ ಬಗ್ಗೆ ಹೆಚ್.ಡಿ. ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಅವರು ನಿರ್ಧರಿಸಲಿದ್ದಾರೆ ಎಂದು ರೇವಣ್ಣ ತಿಳಿಸಿದರು.

### ಸಾರ್ವಜನಿಕ ಜೀವನದಲ್ಲಿ ಕಷ್ಟ ಸಹಜ

ಸಾರ್ವಜನಿಕ ಜೀವನದಲ್ಲಿ ಇರುವವರಿಗೆ ಕಷ್ಟಗಳು ಬಂದೇ ಬರುತ್ತವೆ. ರಾಜ್ಯದ ಎಲ್ಲಾ ಜನರು ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ಪರವಿದ್ದು ಯಾವ ಕಾರಣಕ್ಕೂ ಅವರು ಧೃತಿಗೆಡಬಾರದು ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಹೇಳಿದರು.

ಧರ್ಮಸ್ಥಳ ಮಂಜುನಾಥಸ್ವಾಮಿಗೆ ನೂರಾರು ವರ್ಷಗಳ ಇತಿಹಾಸವಿದೆ. ಕ್ಷೇತ್ರದ ವಿರುದ್ಧ ಯಾರೇ ಷಡ್ಯಂತ್ರ, ಅಪಪ್ರಚಾರ ಮಾಡಿದರು ಏನೂ ಮಾಡಲು ಆಗುವುದಿಲ್ಲ. ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ಜೊತೆಗೆ ಲಕ್ಷಾಂತರ ಜನರಿದ್ದು ಅವರು ಧೃತಿಗೆಡುವುದು ಬೇಡ ಎಂದರು.



# ಡ್ಯಾನ್ಸ್ ಮಾಡುತ್ತಲೇ ಪ್ರಾಣ ಬಿಟ್ಟ ಯುವಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಅರಕಲಗೂಡು: ತಾಲ್ಲೂಕಿನ ಆನಂದಪುರ ಗ್ರಾಮದಲ್ಲಿ ಭಾನುವಾರ ರಾತ್ರಿ ಗಣಪತಿ ವಿಸರ್ಜನೆ ವೇಳೆ ಡ್ರಮ್ ಸೆಟ್ ಮುಂದೆ ಕುಣಿಯುತ್ತಿದ್ದ ಯುವಕ ದಿಢೀರ್ ಹೃದಯಾಘಾತದಿಂದ ಮೃತಪಟ್ಟಿದ್ದಾನೆ. ಗ್ರಾಮದ ವಾಟರ್ ಮ್ಯಾನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಮಂಜುನಾಥ್ (29) ಮೃತರು. ವಿನಾಯಕ ಗೆಳೆಯರ ಬಳಗದಿಂದ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆಯಲ್ಲಿ ಭಾಗವಹಿಸಿದ್ದ. ಗೆಳೆಯರೊಂದಿಗೆ ನೃತ್ಯ ಮಾಡುತ್ತಿದ್ದಾಗಲೇ ಎದೆನೋವು ಕಾಣಿಸಿಕೊಂಡು ಬಿದ್ದಿದ್ದಾನೆ. ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ. ಅರಕಲಗೂಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶಾಸಕ ಸಿಮೆಂಟ್ ಮಂಜು ನೇತೃತ್ವದಲ್ಲಿ ಧರ್ಮ ಯಾತ್ರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ಶಾಸಕ ಸಿಮೆಂಟ್ ಮಂಜು ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ನೇತೃತ್ವದಲ್ಲಿ ಸಕಲೇಶಪುರ, ಆಲೂರು ಸೇರಿ ಜಿಲ್ಲೆಯ ನಾನಾ ಕಡೆಗಳಿಂದ ಸಾವಿರಾರು ಕಾರ್ಯಕರ್ತರು ಸೋಮವಾರ ಧರ್ಮಸ್ಥಳ ಧರ್ಮ ಯಾತ್ರೆಗೆ ತೆರಳಿದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ ವತಿಯಿಂದ ಶೈಕ್ಷಣಿಕ ಸಾಮಾಜಿಕ ಹಾಗೂ ಆರ್ಥಿಕವಾಗಿ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿದೆ. ಇತ್ತೀಚೆಗೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಧರ್ಮದ ವಿರುದ್ಧ ಷಡ್ಯಂತ್ರ ನಡೆಸುತ್ತಿವೆ. ಹಿಂದುಗಳ ಅಸ್ತಿತ್ವಕ್ಕೆ ಧಕ್ಕೆ ಬಂದಾಗ ನಾವೆಲ್ಲ ಒಂದಾಗಿ ಧರ್ಮ ರಕ್ಷಣೆಗೆ ನಿಲ್ಲಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಾಗಲೆಲ್ಲಾ ಹಿಂದು ಧರ್ಮ ಮತ್ತು ಧಾರ್ಮಿಕ ಕೇಂದ್ರಗಳನ್ನು ಗುರಿ ಮಾಡಿ ಚ್ಯುತಿಯಾಗುವಂತಹ ಕೆಲಸ ಮಾಡುತ್ತಿದೆ. ಇದೀಗ ಧರ್ಮಸ್ಥಳ ಮಂಜುನಾಥನ ಸನ್ನಿಧಿ ಬಗ್ಗೆ ಅಪಪ್ರಚಾರ ಮಾಡುವವರಿಗೆ ಪರೋಕ್ಷವಾಗಿ ಕುಮ್ಮಕ್ಕು ನೀಡುವ ಕೆಲಸ ಮಾಡುತ್ತಿದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರ ಎಲ್ಲೋ ಒಂದು ಕಡೆ ಜನರಿಗೆ ಅನುಮಾನ ಬರುವ ರೀತಿ ನಡೆದುಕೊಳ್ಳುತ್ತಿದೆ. ಆದ್ದರಿಂದ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಿ ಎನ್ಐಗೆ ವಹಿಸಬೇಕು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಹಿಂದುಗಳ ಶ್ರದ್ಧಾ ಕೇಂದ್ರ ಶ್ರೀ ಕ್ಷೇತ್ರಕ್ಕೆ ದಕ್ಕೆ ಬಂದ ಸಂದರ್ಭದಲ್ಲಿ ಹಿಂದುಗಳು ಒಂದಾಗಿ ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ ಎಂದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಪ್ರಧಾನ ಕಾರ್ಯದರ್ಶಿ ಅಗ್ನಿ ಸೋಮಶೇಖರ್, ಮಧು ಬೊಮ್ಮನಕೆರೆ, ಮುಖಂಡರಾದ ಬ್ಯಾಕರವಳ್ಳಿ ಜಯಣ್ಣ, ಜಯಪ್ರಕಾಶ್ ದೊಡ್ಡದೀಣೆ, ಪುನೀತ್ ಬನ್ನಹಳ್ಳಿ, ನೇಮಾನ್ ಶೇಖ್, ಪುರಸಭಾ ಸದಸ್ಯ ಪ್ರದೀಪ್, ನವೀನ್ ಶೆಟ್ಟಿ ಹಾಜರಿದ್ದರು.

# ಹಿಂದು ಮಹಾಗಣಪತಿ ಅದ್ಧೂರಿ ವಿಸರ್ಜನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪಟ್ಟಣದ ಕಮಲ್ ದೇವ್ ನರ್ಸಿಂಗ್ ಹೋಂ ಎದುರಿನ ಆವರಣದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದ್ದ ರಾಮಧೂತ ಹಿಂದು ಮಹಾಗಣಪತಿಯನ್ನು ಸಾವಿರಾರು ಭಕ್ತಾಧಿಗಳ ಸಮ್ಮುಖದಲ್ಲಿ ವಿಸರ್ಜನೆ ಮಾಡಲಾಯಿತು.

ಪಟ್ಟಣದ ಕಮಲ್‌ದೇವ್ ನರ್ಸಿಂಗ್ ಹೋಂನಿಂದ ಹೊರಟ ಮೆರವಣಿಗೆ ಮಂಜ್ರಾಬಾದ್ ಕ್ಲಬ್ ಕಡೆಯಿಂದ ಬಿ.ಎಂ. ರಸ್ತೆಗೆ ಬಂದು ನಂತರ ಹಳೇಸಂತೇವೇರಿ ಮಾರ್ಗವಾಗಿ ಪುನ: ಮುಖ್ಯ ರಸ್ತೆಗೆ ಬಂದು ಬ್ರಾಹ್ಮಣರ ಬೀದಿಯಲ್ಲಿ ಒಂದು ಸುತ್ತು ಹಾಕಿ ಹೇಮಾವತಿ ಸೇತುವೆಯಲ್ಲಿ ಕ್ರೇನ್ ಮೂಲಕ ಗಣಪತಿಯನ್ನು ಹೇಮಾವತಿ ನದಿಗೆ ವಿಸರ್ಜನೆ ಮಾಡಲಾಯಿತು. ಮೆರವಣಿಗೆಯಲ್ಲಿ ಸಾವಿರಾರು ಭಕ್ತಾಧಿಗಳು ಭಾಗಿಯಾಗಿದ್ದು ದಕ್ಷಿಣ ಕನ್ನಡದ ವಯೋಲಿನ್ ಹಾಗೂ ಚಂಡೆ, ಡಿಜೆ, ನಾಸಿಕ್ ಬ್ಯಾಂಡ್, ಉಜಿರೆ ಭಜನೆ ತಂಡ, ಟ್ಯಾಬ್ಲೋಗಳು ಹಾಗೂ ಇತರೆ ವಾದ್ಯ ವೃಂದಗಳು ಮೆರಗು ತಂದವು. ಕಲ್ಲಡ್ಕದ ಬೃಹತ್ ಆಂಜನೇಯ ಟ್ಯಾಬ್ಲೋ ಭಕ್ತಾಧಿಗಳ ಗಮನ ಸೆಳೆಯಿತು.

ಧರ್ಮಸ್ಥಳ ಚಲೋ ಕಾರ್ಯಕ್ರಮಕ್ಕೆ ಹೊರಟಿದ್ದ ರಾಜ್ಯ ವಿಪಕ್ಷ ನಾಯಕ ಆರ್. ಅಶೋಕ್, ಶಾಸಕ ಸಿಮೆಂಟ್ ಮಂಜು ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಭಾಗಿಯಾದರು. ಶಾಸಕ ಸಿಮೆಂಟ್ ಮಂಜು ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸಿದರು. ಈ ಸಂದರ್ಭದಲ್ಲಿ ಹಿಂದು ಮುಖಂಡ ರಘು ಅವರನ್ನು ಕಾರ್ಯಕರ್ತರು ಸನ್ಮಾನಿಸಿದರು.

ರಾಮಧೂತ ಗಣಪತಿ ಸಮಿತಿಯ ಮುಖಂಡರಾದ ಕೌಶಿಕ್, ಶ್ರೀಜಿತ್, ಮಂಜು ಕಬ್ಬಿನಗದ್ದೆ, ದುಷ್ಯಂತ್, ಧರ್ಮೇಶ್, ಜತಿನ್, ಶಿವುಜಿಪ್ಪಿ, ದೀಪು, ದಿಲೀಪ್, ವಿಜಿತ್, ಶೇಖರ್ ಇತರರಿದ್ದರು.

# ಸ್ಕಾಲರ್ಸ್ ಸ್ಕೂಲ್‌ನಿಂದ ಗಣೇಶ ಮೂರ್ತಿ ವಿಸರ್ಜನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಗಣೇಶ ಚತುರ್ಥಿ ಪ್ರಯುಕ್ತ ಸ್ಕಾಲರ್ಸ್ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನೆ ಭಕ್ತಿಭಾವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅದ್ಧೂರಿಯಾಗಿ ನೆರವೇರಿತು.

ಶಾಲೆಯ ಆವರಣದಲ್ಲಿ ಅಲಂಕರಿಸಿದ ಗಣೇಶ ವಿಗ್ರಹಕ್ಕೆ ಹೂವು, ಹಣ್ಣು ಹಾಗೂ ನೈವೇದ್ಯ ಸಮರ್ಪಿಸಿ ಪೂಜೆ ಸಲ್ಲಿಸಲಾಯಿತು. ವಿದ್ಯಾರ್ಥಿಗಳ ಸಮೂಹ ಗಾನದಲ್ಲಿ ಗಣಪತಿ ಸ್ತುತಿಗೀತೆಗಳು ಮೊಳಗಿದಾಗ ಪೂರ್ತಿ ಆವರಣವೇ ಭಕ್ತಿಮಯ ವಾತಾವರಣದಿಂದ ಕೂಡಿತ್ತು. ವಿದ್ಯಾರ್ಥಿಗಳು



ತಯಾರಿಸಿದ ಹೂವಿನ ಅಲಂಕಾರ ಗಣಪತಿಯ ಸಾನ್ನಿಧ್ಯವನ್ನು ವೈಭವಯುತವನ್ನಾಗಿಸಿತು. ವಿದ್ಯಾರ್ಥಿಗಳ ಸಾಂಸ್ಕೃತಿಕ ನೃತ್ಯಪ್ರದರ್ಶನವು ಕಾರ್ಯಕ್ರಮದ ಪ್ರಮುಖ ಆಕರ್ಷಣೆ ಆಗಿದ್ದು, ವಿವಿಧ ತರಗತಿಯ ಮಕ್ಕಳು ಗಣಪತಿ ಭಜನೆಗಳಿಗೆ ಹೊಂದಿಕೊಂಡು ಸಾಂಪ್ರದಾಯಿಕ ಮತ್ತು ಆಧುನಿಕ ಶೈಲಿಯ ನೃತ್ಯಗಳನ್ನು ಪ್ರದರ್ಶಿಸಿದರು.


|| ಓಂ ಶ್ರೀ ಗುರುಬಸವಲಿಂಗಾಯ ನಮ: ||

ಸಾಂಸ್ಕೃತಿಕ ನಾಯಕ ಶ್ರೀ ಜಗಜ್ಯೋತಿ ಬಸವೇಶ್ವರ ಬಸವಸಂಸ್ಕೃತಿ ಅಭಿಯಾನದ ಪೂರ್ವಭಾವಿ ಸಭೆ

02-09-2025 ಮಂಗಳವಾರ | ಸಮಯ ಬೆ:10.30 | ಸ್ಥಳ: ಶ್ರೀ ತಣ್ಣೀರುಹಳ್ಳ ಮಠದ ಶ್ರೀ ಸಿದ್ದೇಶ್ವರ ಐಟಿಐ ಮತ್ತು ಶಾಲಾ ಆವರಣ, ತಣ್ಣೀರುಹಳ್ಳ, ಹಾಸನ



ಸರ್ವರಿಗೂ ಸುಸ್ವಾಗತ

ಶರಣರ ಬರವೆಮಗೆ ಪ್ರಾಣ ಜೀವಾಳವಯ್ಯ


# ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ಚೈತನ್ಯ: ದಿನೇಶ್ ಗೂಳಿಗೌಡ

## ಜಿಪಂನಲ್ಲಿ ಪ್ರಗತಿ ಪರಿಶೀಲನಾ ಸಭೆ | ಪ್ರಚಾರ ಹೆಚ್ಚಿಸಲು ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪಂಚ ಗ್ಯಾರಂಟಿ ಯೋಜನೆಗಳಿಗಾಗಿ ಜಿಲ್ಲೆಗೆ ಇದುವರೆಗೆ 3105.78 ಕೋಟಿ ರೂ. ಹಣ ಬಿಡುಗಡೆ ಆಗಿದ್ದು, ಜಿಲ್ಲೆಯಲ್ಲಿ ಶೇ. 99.5ರಷ್ಟು ಅನುಷ್ಠಾನಗೊಂಡಿರುವುದು ಶ್ಲಾಘನೀಯ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ರಾಜ್ಯಉಪಾಧ್ಯಕ್ಷ ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ಯಾರಂಟಿ ಯೋಜನೆಗಳು ರಾಜ್ಯದ ಎಲ್ಲಾ ಕುಟುಂಬಗಳಿಗೆ ಆರ್ಥಿಕ ಚೈತನ್ಯ ತುಂಬುವುದರ ಜೊತೆಗೆ ರಾಜ್ಯದ ಆರ್ಥಿಕ ಪುನಶ್ಚೇತನಕ್ಕೂ ಸಹಕಾರಿಯಾಗಿದೆ. ತಲಾ ಆದಾಯ ಕೂಡ ಹೆಚ್ಚಳವಾಗಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕು. ನೋಟು ಅಮಾನ್ಯ, ಅವೈಜ್ಞಾನಿಕ ಜಿಎಸ್‌ಟಿ ನೀತಿ, ಕೋರೋನಾ ಸಮಯದಲ್ಲಿನ ಲಾಕ್‌ಡೌನ್‌ನಿಂದ ಜನರು ಆರ್ಥಿಕವಾಗಿ ಸಾಕಷ್ಟು ಸಂಕಷ್ಟಕ್ಕೆ ತುತ್ತಾಗಿದ್ದರು. ಜನರಲ್ಲಿ ಕೊಳ್ಳುವ ಶಕ್ತಿ ಕುಸಿದ ಪರಿಣಾಮ ಆರ್ಥಿಕ ಪರಿಸ್ಥಿತಿ ಕುಸಿತ ಕಂಡಿತು. ಗ್ರಾಮೀಣ ಭಾಗದ ಜನರು ಹಾಗೂ ಮಧ್ಯಮ ವರ್ಗದವರಲ್ಲಿ ಖರೀದಿ ಸಾಮರ್ಥ್ಯ ವೃದ್ಧಿಯಾದರೆ ರಾಜ್ಯ, ದೇಶದ ಆರ್ಥಿಕತೆ ಸರಿದೂಗಲಿದೆ ಎಂಬ ಹಿನ್ನೆಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವುದರ ಜೊತೆಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ ಎಂದರು.

ಯಾವುದೇ ಮಧ್ಯವರ್ತಿಗಳ ಹಾವಳಿಯಿಲ್ಲದೆ ಸರ್ಕಾರದ ಯೋಜನೆಗಳು ಫಲಾನುಭವಿಗಳಿಗೆ ನೇರವಾಗಿ ತಲುಪುತ್ತಿರುವ ಜಗತ್ತಿನ ಅತಿದೊಡ್ಡ ಕಾರ್ಯಕ್ರಮ ಪಂಚ ಗ್ಯಾರಂಟಿಗಳು. ಯೋಜನೆ ವಿರೋಧಿಸುವವರು ಬೆರಳೆಣಿಕೆಯಷ್ಟು ಆದರೆ ಸ್ವಾಗತಿಸಿ ಆಶೀರ್ವದಿಸುತ್ತಿರುವವರು ಲಕ್ಷಾಂತರ ಮಂದಿ ಎಂದರು.



ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಮಾತನಾಡಿ, ಇಷ್ಟು ದೊಡ್ಡ ಮೊತ್ತದ ಅನುದಾನವನ್ನು ಹಾಸನ ಜಿಲ್ಲೆಗೆ ನೀಡಿದ್ದಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ರಾಜ್ಯಾಧ್ಯಕ್ಷ ಹೆಚ್.ಎಂ. ರೇವಣ್ಣ ಅವರನ್ನು ಅಭಿನಂದಿಸಿದರು.

ದೇವರ ದರ್ಶನ: ಶಕ್ತಿ ಯೋಜನೆಯಿಂದ ಗ್ರಾಮೀಣ ಜನತೆ ಪುಣ್ಯ ಕ್ಷೇತ್ರಗಳ ದರ್ಶನ ಮಾಡಲು ಸಹಕಾರಿಯಾಗಿದೆ. ಕಳೆದ ಬಾರಿ ಹಾಸನಾಂಬ ದರ್ಶನಕ್ಕೆ ಬೀದರ್‌ನಿಂದ ಚಾಮರಾಜನಗರದ ವರೆಗೆ ಮಹಿಳೆಯರು ಶಕ್ತಿ ಯೋಜನೆ ಮೂಲಕ ಲಕ್ಷಾಂತರ ಸಂಖ್ಯೆಯಲ್ಲಿ ಆಗಮಿಸಿ ದೇವಿಯ ದರ್ಶನ ಪಡೆದರು. 20 ಲಕ್ಷ ಭಕ್ತರು ಹಾಸನಾಂಬ ದರ್ಶನ ಪಡೆದಿದ್ದು ಅದರಲ್ಲಿ ಮಹಿಳೆಯರದ್ದು ಸಿಂಹಪಾಲು. ದೇವರ ಹುಂಡಿಯಲ್ಲಿ 14 ಕೋಟಿ ರೂ. ಹಣ ಸಂಗ್ರಹವಾಗಿದ್ದು ದಾಖಲೆ ಎಂದು ಸಮಿತಿ ಸದಸ್ಯರು ಹೇಳಿದರು.

ಸಾಲದ ಹಣ ಕಡಿತ ಇಲ್ಲ: ಗೃಹಲಕ್ಷ್ಮಿ ಹಣವನ್ನು ಸಾಲದ ಕಂತುಗಳಿಗೆ ಬ್ಯಾಂಕುಗಳು ಕಡಿತ ಮಾಡಿಕೊಳ್ಳುತ್ತಿಲ್ಲ. ಒಂದು ವೇಳೆ ಕಡಿತ ಆದರೂ ಎರಡು ಮೂರು ದಿನದಲ್ಲಿ ಆ ಹಣ ಖಾತೆಗೆ ವಾಪಸ್ ಆಗುತ್ತಿದೆ. ಈ ಬಗ್ಗೆ ಫಲಾನುಭವಿಗಳು ಆತಂಕ ಪಡುವ ಅಗತ್ಯವಿಲ್ಲ ಎಂದು ಲೀಡ್ ಬ್ಯಾಂಕ್ ವ್ಯವಸ್ಥಾಪಕ ಸಭೆಗೆ ಮಾಹಿತಿ ನೀಡಿದರು.

ಗ್ರಾಮ ಪಂಚಾಯಯಿತಿಗಳಲ್ಲಿ ಪ್ರಚಾರ: ಯುವ ನಿಧಿ ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹೆಚ್ಚಿನ ಪ್ರಚಾರ ಕಾರ್ಯ ನಡೆಸಲಾಗುತ್ತಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಹೇಳಿದರು. ಜಿಲ್ಲೆಯ 264 ಗ್ರಾಮ ಪಂಚಾಯತಿ ಕಚೇರಿಗಳಲ್ಲಿ ದೊಡ್ಡ ದೊಡ್ಡ ಬ್ಯಾನರ್ ಅಳವಡಿಸಿ ಪ್ರಚಾರ ನಡೆಸುವುದರ ಜೊತೆಗೆ ಕಾಲೇಜುಗಳಲ್ಲಿ ಪ್ರಚಾರ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

### ಪಂಚ ಗ್ಯಾರಂಟಿಗಳ ಪ್ರಗತಿ ವಿವರ

ಗೃಹಲಕ್ಷ್ಮಿ: ಗೃಹಲಕ್ಷ್ಮಿ ಯೋಜನೆಯಡಿಜಿಲ್ಲೆಯಲ್ಲಿ 4,27,269 ಫಲಾನುಭವಿಗಳಿದ್ದಾರೆ. 2023ರಿಂದ ಜೂನ್ ವರೆಗೆ 1783 ಕೋಟಿರೂ. ಹಣ ಫಲಾನುಭವಿಗಳ ಖಾತೆಗೆಜಮೆಯಾಗಿದ್ದು ಶೇ.99.5 ರಷ್ಟು ಮಂದಿಗೆ ಯೋಜನೆತಲುಪಿದೆ. ಜಿಲ್ಲೆಯಲ್ಲಿ 4201 ಮಂದಿ ಫಲಾನುಭವಿಗಳು ಮರಣ ಹೊಂದಿದ್ದಾರೆ. ಹೀಗಾಗಿ ಮರಣ ಹೊಂದಿರುವವರ ಪಟ್ಟಿ ಕ್ರೋಢೀಕರಿಸಿ ರಾಜ್ಯ ಮತ್ತುಜಿಲ್ಲಾ ಸಮಿತಿಗೆ ಪ್ರತಿ ತಿಂಗಳು ನೀಡಬೇಕುಎಂದು ದಿನೇಶ್ ಗೂಳಿಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದರು.

#### ಗೃಹಜ್ಯೋತಿ

ಗೃಹಜ್ಯೋತಿ ಯೋಜನೆಯಡಿ 5,35,989 ಗ್ರಾಹಕರು ನೋಂದಣಿಯಾಗಿದ್ದು 19,78,6793 ಯುನಿಟ್ ಉಚಿತ ವಿದ್ಯುತ್ ಬಳಕೆ ಮಾಡಿದ್ದಾರೆ. ಇದಕ್ಕಾಗಿ ಸರ್ಕಾರ 415 ಕೋಟಿರೂ. ಸಬ್ಸಿಡಿ ಹಣವನ್ನು ಪಾವತಿ ಮಾಡಲಾಗಿದ್ದು ಶೇ 100ರಷ್ಟು ಪ್ರಗತಿ ಸಾಧಿಸಲಾಗಿದೆ.


#### ಶಕ್ತಿ ಯೋಜನೆ

ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ ಸರಾಸರಿ 2 ಲಕ್ಷ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು, 485 ಕೋಟಿರೂ. ಟಿಕೆಟ್ ಹಣವನ್ನು ನಿಗಮಕ್ಕೆ ಸರ್ಕಾರ ಪಾವತಿ ಮಾಡಿದೆ.

#### ಅನ್ನಭಾಗ್ಯ

ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 4,29,023 ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ 407.05 ಕೋಟಿರೂ. ಹಣವನ್ನು ವರ್ಗಾಯಿಸಲಾಗಿದೆ. ಫೆಬ್ರವರಿಯಿಂದ 170 ರೂ. ಹಣದ ಬದಲಿಗೆಐದುಕೆಜಿಅಕ್ಕಿ ವಿತರಣೆ ಮಾಡಲಾಗುತ್ತಿದೆ. 84% ಬಿಪಿಎಲ್‌ಕಾರ್ಡ್‌ದಾರರಿದ್ದುಎಲ್ಲರಿಗೂ ಸಮರ್ಪಕವಾಗಿ ಅಕ್ಕಿ ವಿತರಣೆ ಮಾಡಲಾಗುತ್ತಿದೆ.

ಯುವನಿಧಿ: ಯುವನಿಧಿ ಯೋಜನೆಗೆ ಸಂಬಂಧಿಸಿದಂತೆ 6367 ಫಲಾನುಭವಿಗಳಿಗೆ 15.78 ಕೋಟಿರೂ. ಹಣವನ್ನುಡಿಬಿಟಿ ಮೂಲಕ ವರ್ಗಾವಣೆ ಮಾಡಲಾಗಿದೆ.



ಕಾಲೇಜುಗಳಲ್ಲಿ ಯೋಜನೆಕುರಿತು ಪ್ರಚಾರ ಮಾಡಿ ನೋಂದಣಿಅಭಿಯಾನ ನಡೆಸಲಾಗುತ್ತಿದೆ.

ಹಾಸನದ ಶೇ.99.50 ನಾಗರಿಕರು ಪಂಚ ಗ್ಯಾರಂಟಿ ಯೋಜನೆಗಳ ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳು ಹೀಗೆಯೇ ಮುಂದುವರೆಯಲಿ ಎಂದು ಹೇಳುತ್ತಿದ್ದಾರೆಯೇ ಹೊರತುಯಾರೊಬ್ಬರು ಈ ಯೋಜನೆ ಸ್ಥಗಿತಗೊಳಿಸಿ ಎಂಬ ಮಾತುಎಲ್ಲೂ ಕೇಳಿಬರುತ್ತಿಲ್ಲ. ಗ್ಯಾರಂಟಿ ಯೋಜನೆಗಳಿಗೆ ಜಿಲ್ಲೆಯಲ್ಲಿಉತ್ತಮ ಸ್ಪಂದನೆ ವ್ಯಕ್ತವಾಗಿದೆಎಂದುಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದರಾಜ್ಯಉಪಾಧ್ಯಕ್ಷರಾದ ದಿನೇಶ್ ಗೂಳಿಗೌಡ ಅವರು ಹೇಳಿದರು.

ಸಭೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷರಾದ ಹೆಚ್.ಪಿ. ಶ್ರೀಧರ್ ಗೌಡ, ಧರ್ಮಶೇಖರ, ಜೆ.ಬಿ. ಆನಂದಮೂರ್ತಿ, ಶಿವಕುಮಾರ್, ಸದಸ್ಯರಾದ ಕಮಲಮ್ಮ ಇತರರಿದ್ದರು.

# ದಕ್ಷ್ ಗುಪ್ತಾ 969 ವರ್ಕ್ ಕಲ್ಚರ್: ಏನಿದು ಹೊಸ ವೈರಲ್ ವಿಡಿಯೋ?

**ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ದಕ್ಷ್ ಗುಪ್ತಾ ಎಂಬ ಯುವ ಉದ್ಯಮಿಯೊಬ್ಬರ '969 ವರ್ಕ್ ಕಲ್ಚರ್' ಕುರಿತಾದ ವಿಡಿಯೋ ವೈರಲ್ ಆಗಿದ್ದು, ಕೆಲಸದ ಸಂಸ್ಕೃತಿಯ ಬಗ್ಗೆ ತೀವ್ರ ಚರ್ಚೆಗೆ ಕಾರಣವಾಗಿದೆ. ಈ ಕುರಿತು ಈ ಲೇಖನವು ವಿವರವಾದ ಅವಲೋಕನವನ್ನು ನೀಡುತ್ತದೆ.**

### 969 ವರ್ಕ್ ಕಲ್ಚರ್ ಎಂದರೇನು?


ದಕ್ಷ್ ಗುಪ್ತಾ, ಒಂದು ಟೆಕ್ ಸ್ಟಾರ್ಟ್‌ಅಪ್‌ನ ಸಿಇಒ, ತಮ್ಮ ಕಂಪನಿಯಲ್ಲಿ ಅನುಸರಿಸುವ ಅ969 ವರ್ಕ್ ಕಲ್ಚರ್ಟ ಬಗ್ಗೆ ಒಂದು ಸಂದರ್ಶನದಲ್ಲಿ ಮಾತನಾಡಿದ್ದರು. ಈ ಮಾದರಿಯ ಪ್ರಕಾರ, ಉದ್ಯೋಗಿಗಳು ಬೆಳಗ್ಗೆ 9 ರಿಂದ ರಾತ್ರಿ 9ರ ವರೆಗೆ, ವಾರದ 6 ದಿನ ಕೆಲಸ ಮಾಡಬೇಕು. ಈ ಕಠಿಣ ಕೆಲಸದ ವೇಳಾಪಟ್ಟಿಯು ಉತ್ಪಾದಕತೆಯನ್ನು ಹೆಚ್ಚಿಸುತ್ತದೆ ಮತ್ತು ಯುವ ಉದ್ಯೋಗಿಗಳಿಗೆ ತಮ್ಮ ವೃತ್ತಿಯಲ್ಲಿ ಶೀಘ್ರವಾಗಿ ಬೆಳೆಯಲು ಸಹಾಯ ಮಾಡುತ್ತದೆ ಎಂದು ಗುಪ್ತಾ ವಾದಿಸಿದ್ದಾರೆ. ಆದರೆ, ಈ ಕೆಲಸದ ಸಂಸ್ಕೃತಿಯು ಉದ್ಯೋಗಿಗಳ ಆರೋಗ್ಯ ಮತ್ತು ಕೆಲಸ-ಜೀವನ ಸಮತೋಲನದ ಮೇಲೆ ಪರಿಣಾಮ ಬೀರುತ್ತದೆ ಎಂದು ಟೀಕಾಕಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

### ವೈರಲ್ ಆಗಿದ್ದೇಕೆ?

ದಕ್ಷ್ ಗುಪ್ತಾ ಅವರ ಈ ಹೇಳಿಕೆಯ ವಿಡಿಯೋ ಎಕ್ಸ್ ನಂತಹ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಲಕ್ಷಾಂತರ ಜನರು ಇದನ್ನು ವೀಕ್ಷಿಸಿದ್ದಾರೆ. ಯುವ ಉದ್ಯೋಗಿಗಳು ಮತ್ತು ವೃತ್ತಿಪರರು ಈ ವಿಷಯದ ಬಗ್ಗೆ ತೀವ್ರವಾದ ಚರ್ಚೆಯಲ್ಲಿ ತೊಡಗಿದ್ದಾರೆ. ಕೆಲವರು ಗುಪ್ತಾನವರ ವಾದವನ್ನು ಬೆಂಬಲಿಸಿದರೆ, ಇನ್ನೂ ಕೆಲವರು ಇದನ್ನು ಅವಿಷಕಾರಿ ಕೆಲಸದ ಸಂಸ್ಕೃತಿಟ ಎಂದು ಟೀಕಿಸಿದ್ದಾರೆ. ಈ ವಿಡಿಯೋದಿಂದಾಗಿ ಕೆಲಸದ ಸಮಯ, ಉತ್ಪಾದಕತೆ, ಮತ್ತು ಉದ್ಯೋಗಿಗಳ ಯೋಗಕ್ಷೇಮದ ಕುರಿತಾದ ಚರ್ಚೆಗಳು ಮತ್ತೆ ಮುಂಚೂಣಿಗೆ ಬಂದಿವೆ.

### ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿಕ್ರಿಯೆ

ಎಕ್ಸ್‌ನಲ್ಲಿ ಈ ವಿಷಯವು ಟ್ರೆಂಡ್ ಆಗಿದ್ದು, 969 ಎಂಬ ಹ್ಯಾಷ್‌ಟ್ಯಾಗ್ ನಡಿಯಲ್ಲಿ ಸಾವಿರಾರು ಪೋಸ್ಟ್‌ಗಳು ಕಾಣಿಸಿಕೊಂಡಿವೆ. ಕೆಲವು ಬಳಕೆದಾರರು, ಅಈ




ರೀತಿಯ ಕೆಲಸದ ಸಂಸ್ಕೃತಿಯು ಯುವ ಜನರ ಆರೋಗ್ಯವನ್ನು ಹಾಳುಮಾಡುತ್ತದೆ ಮತ್ತು ಬರ್ನ್‌ಔಟ್‌ಗೆ ಕಾರಣವಾಗುತ್ತದೆಟ ಎಂದಿದ್ದಾರೆ. ಮತ್ತೊಂದೆಡೆ, ಕೆಲವು ಉದ್ಯಮಿಗಳು, ಅಕಠಿಣ ಕೆಲಸವೇ ಯಶಸ್ಸಿನ ಕೀಲಿಯಾಗಿದೆಟ ಎಂದು ಗುಪ್ತಾನವರನ್ನು ಬೆಂಬಲಿಸಿದ್ದಾರೆ. ಒಬ್ಬ ಬಳಕೆದಾರರು ಟ್ವೀಟ್ ಮಾಡಿದ್ದಾರೆ. ಅ969 ವರ್ಕ್ ಕಲ್ಚರ್ ಎಲ್ಲರಿಗೂ ಸೂಕ್ತವಲ್ಲ, ಆದರೆ ಸ್ಟಾರ್ಟ್‌ಅಪ್‌ಗಳಂತಹ ತೀವ್ರ ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಇದು ಅಗತ್ಯವಿರಬಹುದು.ಟ

### ತಜ್ಞರ ಅಭಿಪ್ರಾಯ

ಕೆಲಸದ ಸಂಸ್ಕೃತಿ ಮತ್ತು ಉದ್ಯೋಗಿಗಳ ಯೋಗಕ್ಷೇಮದ ತಜ್ಞರು ಈ ವಿಷಯದ ಬಗ್ಗೆ ಮಿಶ್ರ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನ ಮಾನವ ಸಂಪನ್ಮೂಲ ತಜ್ಞೆ ಡಾ. ಸುಮನಾ ರಾವ್ ಅವರು, ಅದೀರ್ಘಕಾಲ ಕೆಲಸ ಮಾಡುವುದು ಉತ್ಪಾದಕತೆಯನ್ನು ಹೆಚ್ಚಿಸಬಹುದು, ಆದರೆ ಇದು ಉದ್ಯೋಗಿಗಳ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ಋಣಾತ್ಮಕ ಪರಿಣಾಮ ಬೀರಬಹುದು. ಕಂಪನಿಗಳು ಕೆಲಸ-ಜೀವನ ಸಮತೋಲನಕ್ಕೆ ಆದ್ಯತೆ ನೀಡಬೇಕುಟ ಎಂದಿದ್ದಾರೆ.

ಇದೇ ವಿಷಯದಲ್ಲಿ ಮನಃಶಾಸ್ತ್ರಜ್ಞ ಡಾ. ವಿನಯ್ ಕುಮಾರ್ ಹೇಳಿದ್ದಾರೆ: 969 ಮಾದರಿಯು ಉದ್ಯೋಗಿಗಳಿಗೆ ಒತ್ತಡವನ್ನುಂಟುಮಾಡಿ, ದೀರ್ಘಕಾಲದಲ್ಲಿ ಕಂಪನಿಯ ಉತ್ಪಾದಕತೆಗೂ ಧಕ್ಕೆ ತರಬಹುದು. ಆರೋಗ್ಯಕರ ಕೆಲಸದ ಸಂಸ್ಕೃತಿಯು ಉದ್ಯೋಗಿಗಳ ಯೋಗಕ್ಷೇಮಕ್ಕೆ ಒತ್ತು ನೀಡಬೇಕು.

### ಕಾನೂನು ಮತ್ತು ನೈತಿಕ ಆಯಾಮ

ಕಾರ್ಮಿಕ ಕಾನೂನು ತಜ್ಞರ ಪ್ರಕಾರ, ಭಾರತದ ಕೆಲಸದ ಕಾನೂನುಗಳು ಉದ್ಯೋಗಿಗಳಿಗೆ ಗರಿಷ್ಠ ಕೆಲಸದ ಸಮಯವನ್ನು ನಿಗದಿಪಡಿಸಿವೆ. ಕಾರ್ಖಾನೆಗಳ ಕಾಯ್ದೆ 1948ರ ಪ್ರಕಾರ, ವಯಸ್ಕ ಉದ್ಯೋಗಿಯು ದಿನಕ್ಕೆ 9 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡಬಾರದು ಮತ್ತು ವಾರಕ್ಕೆ 48 ಗಂಟೆಗಳ ಗರಿಷ್ಠ ಮಿತಿಯನ್ನು ಹೊಂದಿರುತ್ತದೆ. ಆದರೆ, ಟೆಕ್ ಸ್ಟಾರ್ಟ್‌ಅಪ್‌ಗಳಂತಹ ಕ್ಷೇತ್ರಗಳಲ್ಲಿ ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸದಿರುವುದು ಸಾಮಾನ್ಯವಾಗಿದೆ.

### ದಕ್ಷ್ ಗುಪ್ತಾ ಸ್ಪಷ್ಟನೆ

ವೈರಲ್ ವಿಡಿಯೋದಿಂದ ಉಂಟಾದ ಟೀಕೆಗಳಿಗೆ ಪ್ರತಿಕ್ರಿಯೆಯಾಗಿ, ದಕ್ಷ್ ಗುಪ್ತಾ ಒಂದು ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ. ಅನಮ್ಮ ಕಂಪನಿಯ 969 ವರ್ಕ್ ಕಲ್ಚರ್ ಎಲ್ಲರಿಗೂ ಕಡ್ಡಾಯವಲ್ಲ. ಇದು ಸ್ವಯಂಪ್ರೇರಿತ ಉದ್ಯೋಗಿಗಳಿಗೆ ತಮ್ಮ ವೃತ್ತಿಯಲ್ಲಿ ಶೀಘ್ರವಾಗಿ ಬೆಳೆಯಲು ಒಂದು ಅವಕಾಶವಾಗಿದೆ. ಉದ್ಯೋಗಿಗಳ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ನಾವು ಆದ್ಯತೆ ನೀಡುತ್ತೇವೆಟ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಇದರ ಜೊತೆಗೆ, ಗುಪ್ತಾ ಅವರು ತಮ್ಮ ಕೆಲಸದ ಸಂಸ್ಕೃತಿಯನ್ನು ವಿವರಿಸುವಾಗ ಉದ್ಯೋಗಿಗಳ ಜೀವನಶೈಲಿಯ ಬಗ್ಗೆಯೂ ಮಾತನಾಡಿದ್ದಾರೆ. ಅವರ ಪ್ರಕಾರ, ಯುವ ಎಐ ಕೆಲಸಗಾರರು ಅಮದ್ಯಪಾನ ಮಾಡಬೇಡಿ, ಡ್ರಗ್ಸ್ ಬಳಸಬೇಡಿ, 9-9-6 ಕೆಲಸ ಮಾಡಿ, ಭಾರೀ ತೂಕ ಎತ್ತಿ, ದೂರ ಓಡಿ, ಬೇಗ ಮದುವೆಯಾಗಿ, ನಿದ್ರೆಯನ್ನು ಟ್ರ್ಯಾಕ್ ಮಾಡಿ, ಸ್ಟೇಕ್ ಮತ್ತು ಮೊಟ್ಟೆಗಳನ್ನು ತಿನ್ನಿಟ ಎಂಬ ವೈಬ್ ಅನುಸರಿಸುತ್ತಾರೆ.92014 ಬರ್ನಿಂಗ್ ಮ್ಯಾನ್ ಬಗ್ಗೆ ಮಾತನಾಡುತ್ತಾ, ಅದು ಈಗಿನ ಟೆಕ್ ಸಂಸ್ಕೃತಿಗೆ ಹೊಂದಿಕೊಳ್ಳುವುದಿಲ್ಲ ಎಂದು ಅವರು ಟೀಕಿಸಿದ್ದಾರೆ, ಏಕೆಂದರೆ ಇದು ಹಳೆಯದು ಮತ್ತು ಯುವ ಕೆಲಸಗಾರರ ಕಟ್ಟುನಿಟ್ಟಾದ ಜೀವನಶೈಲಿಗೆ ಹೊಂದಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ದಕ್ಷ್ ಗುಪ್ತಾ ಅವರ 969 ವರ್ಕ್ ಕಲ್ಚರ್ ವಿವಾದವು ಆಧುನಿಕ ಕೆಲಸದ ಸ್ಥಳಗಳಲ್ಲಿ ಉತ್ಪಾದಕತೆ ಮತ್ತು ಯೋಗಕ್ಷೇಮದ ನಡುವಿನ ಸಮತೋಲನದ ಬಗ್ಗೆ ಪ್ರಮುಖ ಚರ್ಚೆಗೆ ಕಾರಣವಾಗಿದೆ. ಈ ವಿಷಯವು ಕಂಪನಿಗಳಿಗೆ ತಮ್ಮ ಕೆಲಸದ ಸಂಸ್ಕೃತಿಯನ್ನು ಮರುಪರಿಶೀಲಿಸಲು ಮತ್ತು ಉದ್ಯೋಗಿಗಳಿಗೆ ಆರೋಗ್ಯಕರ, ಸಮತೋಲಿತ ಕೆಲಸದ ವಾತಾವರಣವನ್ನು ಒದಗಿಸಲು ಪ್ರೇರೇಪಿಸಿದೆ.

## ಅಕ್ರಮ ಸಾಗಾಟ: 1.28 ಲಕ್ಷ ರೂ. ಮೌಲ್ಯದ ಅನ್ನಭಾಗ್ಯ ಅಕ್ಕಿ ವಶ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಅನ್ನಭಾಗ್ಯ ಅಕ್ಕಿಯನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಪಿಕ್‌ಅಪ್ ವಾಹನವನ್ನು ತಾಲ್ಲೂಕಿನ ಕಂಚೇನಹಳ್ಳಿ ಬಳಿ ವಶಕ್ಕೆ ಪಡೆದಿರುವ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹೊಳೆನರಸೀಪುರ ತಾಲ್ಲೂಕು ಅಗ್ರಹಾರ ವಡ್ಡರಹಳ್ಳಿ ಗ್ರಾಮದ ಚಾಲಕ ನಾರಾಯಣ ಬಂಧಿತ ಆರೋಪಿ. 1.28 ಲಕ್ಷ ರೂ. ಮೌಲ್ಯದ ಒಟ್ಟು 36 ಕ್ವಿಂಟಾಲ್ ಅಕ್ಕಿಯನ್ನು ಕಾಳ ಸಂತೆಯಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಸಾಗಿಸಲಾಗುತ್ತಿತ್ತು. ಸಾರ್ವಜನಿಕರು ನೀಡಿದ ದೂರಿನ ಹಿನ್ನಲೆಯಲ್ಲಿ ಆಹಾರ ಶಿರಸ್ತೇದಾರ್ ಮಂಜು ಹಾಗೂ ಆಹಾರ ನಿರೀಕ್ಷಕಿ ರೂಪಾ ಅವರು ಖಾಸಗಿ ವಾಹನದಲ್ಲಿ ತೆರಳಿ ಪಿಕ್‌ಅಪ್ ವಾಹನವನ್ನು ಹಿಂಬಾಲಿಸಿ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಹೊಳೆನರಸೀಪುರದ ಯೋಗೇಶ್ ಎಂಬುವವರು ಅಕ್ಕಿ ತೆಗೆದುಕೊಂಡು ಬರಲು ಹೇಳಿದ್ದರೆಂದು ನಾರಾಯಣ ವಿಚಾರಣೆಯಲ್ಲಿ ತಿಳಿಸಿದ್ದಾನೆ. ಸೋಮವಾರ ಪೇಟೆ ಮತ್ತು ಅರಕಲಗೂಡು ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಸಂಗ್ರಹಿಸಿದ ಅಕ್ಕಿ ಇದಾಗಿದೆ ಎಂದು ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ವಿತರಿಸಲಾದ ಅಕ್ಕಿಯನ್ನು ಪಡಿತರದಾರರು ಕಡಿಮೆ ಬೆಲೆಗೆ ದಿನಸಿ ಅಂಗಡಿಗಳಿಗೆ ಮಾರಾಟ ಮಾಡಿರುತ್ತಾರೆ. ಅದನ್ನು ಯೋಗೇಶ್ ಖರೀದಿಸಿ ತರುತ್ತಾನೆಂದು ತಿಳಿದುಬಂದಿದೆ. ಪ್ರಕರಣ ದಾಖಲಿಸಿಕೊಂಡಿರುವ ಅರಕಲಗೂಡು ಪೊಲೀಸರು ಯೋಗೇಶ್ ಬಂಧನಕ್ಕೆ ಬಲೆ ಬೀಸಿದ್ದಾರೆ.

## ಅಂತರಂಗದ ಭಾವನೆ ಗಟ್ಟಿಯಾಗಿದ್ದರಷ್ಟೇ ಕವಿಯಾಗಲು ಸಾಧ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಎಲ್ಲರೂ ಕವಿಯಾಗಲು ಸಾಧ್ಯವಿಲ್ಲ. ಅಧ್ಯಯನ, ಅನುಭವ ಹಾಗೂ ಅಂತರಂಗದಲ್ಲಿ ಭಾವನೆಗಳನ್ನು ಗಟ್ಟಿಯಾಗಿ ಕಾಪಾಡಿಕೊಳ್ಳವವರು ಮಾತ್ರ ಕವಿಯಾಗುತ್ತಾರೆಂದು ಎವಿಕೆ ಮಹಿಳಾ ಕಾಲೇಜು ಪ್ರಾಂಶುಪಾಲ ಸೀ.ಚ. ಯತೀಶ್ವರ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಭಾನುವಾರ ರಾಜ್ಯ ಹಾಗೂ ಜಿಲ್ಲಾ ಬರಹಗಾರರ ಸಂಘದಿಂದ ಹೆಚ್.ಬಿ. ಜ್ವಾಲನಯ್ಯನವರ ಸ್ಮರಣಾರ್ಥ ನಡೆದ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿ, ಎಲ್ಲರೂ ರೈತರಾಗಿದ್ದರೂ ಕೃಷಿ ಕುರಿತು ಕಾವ್ಯ ರೂಪಕ್ಕೆ ತರಲು ಕೆಲವರಿಂದ ಮಾತ್ರ ಸಾಧ್ಯವಾಗಿದೆ ಎಂದರು.

ಜಗತ್ತಿನ ಅನುಭವಗಳನ್ನು ತನ್ನೊಳಗೆ ಇಟ್ಟುಕೊಂಡು ಅದಕ್ಕೆ ಜೀವಂತಿಕೆ ಕೊಡುವುದೇ ಕವಿಯ ವೈಶಿಷ್ಟ್ಯ. ಸಾಹಿತ್ಯದಿಂದ ಮನ ಪರಿವರ್ತನೆಯನ್ನು ಕಾಣಬಹುದಾಗಿದೆ. ಕಥೆ, ಕಾದಂಬರಿ



ಹಾಗು ಕವಿತೆಗಳು ಮನುಷ್ಯನ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುತ್ತವೆ ಎಂದು ತಿಳಿಸಿದರು.

ಪಂಪ, ಬಸವಣ್ಣ, ಅಲ್ಲಮ ಪ್ರಭು, ಅಕ್ಕಮಹಾದೇವಿ, ಚಾಮರಸ ಸೇರಿ ಅನೇಕರು ಶಬ್ದಗಳ ಜೊತೆ ಆಟವಾಡಿ ಜನರಿಗೆ ತಲುಪಿಸಿದ್ದಾರೆ. ಹಾಗಾಗಿ ಕವಿ ಸಮಾಜ ಸುಧಾರಕನ ಸ್ಥಾನದಲ್ಲಿ ನಿಲ್ಲುತ್ತಾನೆ. ಸಾಹಿತ್ಯದಲ್ಲಿ ಕವಿಗಳ ಪಾತ್ರ ಎಷ್ಟಿದೆಯೋ ಅಷ್ಟೇ ಜವಾಬ್ದಾರಿ ಗಾಯಕರದ್ದೂ ಆಗಿರುತ್ತದೆ. ಕವಿಯ ಭಾವನೆ ಎಲ್ಲರಿಗೂ ಅರ್ಥವಾಗುವಂತೆ ಮುಟ್ಟಿಸುವ ಕೆಲಸವನ್ನು ಗಾಯಕರು ಶ್ರದ್ಧೆಯಿಂದ ಮಾಡುತ್ತಾರೆಂದರು.

ಯುವ ಸಮುದಾಯ ಸಾಹಿತ್ಯಕ್ಕೆ ಆದ್ಯತೆ ನೀಡಬೇಕು. ತಂತ್ರಜ್ಞಾನ ಯುಗದಲ್ಲಿ ಯುವಕರ ಅಭಿರುಚಿ, ಆಕಾಂಕ್ಷೆಗಳು ಬದಲಾಗುತ್ತಿವೆ. ವ್ಯಕ್ತಿತ್ವ ವಿಕಸನ, ಮಾನವೀಯ ಮೌಲ್ಯ, ಸಂಸ್ಕಾರ ಹಾಗು ಸಮಾಜದ ಏಳಿಗೆಗೆ ಏನಾದರೂ ಕೊಡುಗೆ ನೀಡಬೇಕೆಂದು ಬಯಸಿದರೆ ಅಂತವರು ಮೊದಲು ಸಾಹಿತ್ಯಾಸಕ್ತಿ ಬೆಳೆಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಬರಹಗಾರರ ಸಂಘದ ಜಿಲ್ಲಾಧ್ಯಕ್ಷ ಸುಂದರೇಶ್ ಡಿ. ಉಡುವಾರೆ ಮಾತನಾಡಿ, ಸಾಹಿತ್ಯ ಕ್ಷೇತ್ರಕ್ಕೆ ಜಿಲ್ಲೆಯ ಕೊಡುಗೆ ಹೆಚ್ಚಿದೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅನಕೃ ಸೇರಿದಂತೆ ಅನೇಕರು ರಾಜ್ಯಾದ್ಯಂತ ಹೆಸರುವಾಸಿಯಾಗಿದ್ದಾರೆ. ಅವರ ಕುರಿತು ಗಡಿ ಜಿಲ್ಲೆಗಳಲ್ಲಿ ಜನರು ಮಾತನಾಡಿಕೊಳ್ಳುತ್ತಿದ್ದರೂ ತವರು ಜಿಲ್ಲೆಯಲ್ಲೇ ಸ್ಮರಿಸದಿರುವುದು ಬೇಸರ ತರಿಸಿದರು. ಆದ್ದರಿಂದ ನಾನು ಬರಹಗಾರರ ಸಂಘ ಜಿಲ್ಲಾಧ್ಯಕ್ಷನಾಗಿ ಸಾಹಿತ್ಯ ಸೇವೆ ಆರಂಭಿಸಿದೆ. ಇದುವರೆಗೆ 700 ಜನರನ್ನು ಗುರುತಿಸಿ ಸನ್ಮಾನಿಸಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಒಂಬತ್ತು ಸಾಧಕರಿಗೆ ಸನ್ಮಾನ ಮಾಡಲಾಯಿತು.

ಚನ್ನರಾಯಪಟ್ಟಣ ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಬಿ.ಆರ್. ಯುವರಾಜ್, ಸಾಹಿತಿ ಎನ್.ಎಲ್. ಚನ್ನೇಗೌಡ, ಎ.ಎನ್. ಮಧುಸೂದನ್, ವಿಶ್ವಾಸ್ ಡಿ. ಗೌಡ, ಪತ್ರಕರ್ತ ವೆಂಕಟೇಶ್, ಸುಕನ್ಯ ಮುಕುಂದ, ಬಾರಾಳು ಶಿವರಾಮು, ಚೈತ್ರಾ ಮಂಜೇಗೌಡ, ಬೇಲೂರು ನಾಗೇಶ್, ಬಾ.ನಂ. ಲೋಕೇಶ್ ಮತ್ತಿತರರಿದ್ದರು.

## ಮಹಾಬಲ ಗಣಪತಿ ವಿಸರ್ಜನಾ ಮೆರವಣಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಸಮೀಪದ ಗೊಟ್ಟರವಳ್ಳಿ ರಸ್ತೆಯಲ್ಲಿ ಪ್ರತಿಷ್ಠಾಪಿಸಿದ್ದ 15 ಅಡಿ ಎತ್ತರದ ಮಹಾಬಲ ಗಣೇಶ ಮೂರ್ತಿಯನ್ನು ವಿಸರ್ಜಿಸಲಾಯಿತು. ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪಟ್ಟಣದ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ನಡೆಸಲಾಯಿತು. ರಾತ್ರಿ ವಿಷ್ಣು ಸಮುದ್ರ ಕೆರೆಯಲ್ಲಿ ವಿಸರ್ಜಿಸಲಾಯಿತು. ಡೊಳ್ಳು ಕುಣಿತ, ಕೇರಳದ ಚಂಡೆ ಮೇಳ, ಕೀಲು ಕುದುರೆ, ಗೊಂಬೆಗಳ ನೃತ್ಯ ಕಲಾತಂಡಗಳು, ವಾದ್ಯಗೋಷ್ಠಿ ಹಾಗು ಭಕ್ತಿಗೀತೆ ಗಾಯನ ಮೆರವಣಿಗೆಗೆ ಕಳೆ ತಂದಿತು. ಬೇಲೂರಿನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ 15 ಅಡಿ ಎತ್ತರದ ಗಣೇಶ ಮೂರ್ತಿ ಪ್ರತಿಷ್ಠಾಪಿಸಲಾಗಿತ್ತು. ಮಹಾಬಲ ಗಣಪತಿ ಸೇವಾ ಸಮಿತಿಯ ಸದಸ್ಯರು ಮತ್ತು ನಿಸ್ವಾರ್ಥ ಗೆಳೆಯರ ಬಳಗದ ಪದಾಧಿಕಾರಿಗಳು ಹಾಜರಿದ್ದರು.



## ಪ್ರತಿಭಾವಂತ ವಿದ್ಯಾರ್ಥಿಗಳ ಪ್ರೋತ್ಸಾಹಿಸುವುದು ಜವಾಬ್ದಾರಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಪ್ರತಿಭಾವಂತ ವಿದ್ಯಾರ್ಥಿಗಳ ಕಲಿಕೆಯ ತುಡಿತ ಹಾಗು ಸಾಧಿಸಬೇಕೆಂಬ ಛಲ ಇರುವವರನ್ನು ಪ್ರೋತ್ಸಾಹಿಸುವುದು ಎಲ್ಲರ ಜವಾಬ್ದಾರಿ ಎಂದು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಉಪಾಧ್ಯಕ್ಷ ಟಿ. ಶಿವಕುಮಾರ್ ಹೇಳಿದರು.

ಪಟ್ಟಣದ ರಾಮ ಮಂದಿರದಲ್ಲಿ ದಿ. ಗುತ್ತಮ್ಮ ಯಜಮಾನ್ ತಮ್ಮೇಗೌಡ ಹಾಗೂ ದಿ. ಗೌರಮ್ಮ ಟಿ.ಮಲ್ಲೇಶ್ ಅವರ ಜ್ಞಾಪಕಾರ್ಥ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳ ಕಲಿಕೆಗೆ ಪೂರಕವಾಗಿ ತಂದೆ-ತಾಯಿ ನೀಡುವ ಪ್ರೋತ್ಸಾಹ, ಅವರ ಶ್ರಮ ಮತ್ತು ಶಿಕ್ಷಕರ ಉತ್ತೇಜನ, ಮಾರ್ಗದರ್ಶನಕ್ಕೆ ಅಭಿನಂದಿಸುವುದು ಪ್ರಜ್ಞಾವಂತರ ಜವಾಬ್ದಾರಿ ಎಂದರು.

ಹೆಣ್ಣು ಮಕ್ಕಳಿಗೆ ಕಲಿಕೆಗೆ ಪೂರಕ ವ್ಯವಸ್ಥೆ ಕಲ್ಪಿಸಿದರೆ ಅವರು ಉನ್ನತ ವ್ಯಾಸಂಗ ಮಾಡಿ, ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಮೊದಲೆಲ್ಲ ಹೆಣ್ಣು ಮಕ್ಕಳಿಗೆ ಬೇಗ ಮದುವೆ ಮಾಡುತ್ತಿದ್ದರು. ಆದರೆ ಈಗ ಇನ್ನೂ ವಿದ್ಯಾಭ್ಯಾಸ ಮುಂದುವರಿಸಲಿ ಎಂಬ ವಾತಾವರಣವಿದೆ. ಈ ಅವಕಾಶವನ್ನು ವಿದ್ಯಾರ್ಥಿನಿಯರು ಬಳಸಿಕೊಳ್ಳಬೇಕು. ವಿದ್ಯಾರ್ಥಿಗಳು ಕಲಿಕೆಯ ಸಮಯದಲ್ಲಿ ದೈಹಿಕ ಹಾಗು ಮಾನಸಿಕವಾಗಿ ಸದೃಢರಾಗಲು ಯೋಗ, ಪ್ರಾಣಾಯಾಮ, ಕ್ರೀಡೆ ಹಾಗು ಮನಸ್ಸಿಗೆ ಉಲ್ಲಾಸ ನೀಡುವ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿಸುವ ಮೂಲಕ ಆತ್ಮಸ್ಥೈರ್ಯ ಹೆಚ್ಚಿಸಿಕೊಳ್ಳಬೇಕೆಂದರು.

ಮೈಸೂರು ಶಾಲಾ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಹೆಚ್.ಎನ್. ಗೀತಾಂಬ, ಪುರಸಭೆ ಮಾಜಿ ಅಧ್ಯಕ್ಷೆ ಸುಧಾ ನಳಿನಿ, ಹಾಸನ ಸೆಂಟ್ರಲ್ ಕಾಮರ್ಸ್ ಕಾಲೇಜು ಸಂಸ್ಥಾಪಕ ಮಹೇಶ್, ತಾಲ್ಲೂಕು ಆರ್ಯ ಈಡಿಗರ ಸಂಘದ ಅಧ್ಯಕ್ಷ ದೊಡ್ಡಮಲ್ಲೇಗೌಡ ಮಾತನಾಡಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಇಂಜಿನಿಯರಿಂಗ್ ಹಾಗೂ ಇತರ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ 22 ವಿದ್ಯಾರ್ಥಿಗಳನ್ನು ಸನ್ಮಾನಿಸಿ, ನಗದು ಬಹುಮಾನ ನೀಡಿ ಗೌರವಿಸಲಾಯಿತು.

## ಇತಿಹಾಸದಲ್ಲಿ ಈ ದಿನ

### ಸೆಪ್ಟೆಂಬರ್-2

**1666:** ಪ್ರಸಿದ್ಧ ವಿಜ್ಞಾನಿ ಸರ್ ಜಾರ್ಜ್ ಸ್ಟೆಲ್ಲಾ ಅಗ್ರೇಟ್ ಫೈರ್ ಆಫ್ ಲಂಡನ್‌ಟ ಬೆಂಕಿ ಅವಘಡದಲ್ಲಿ ಸಿಲುಕಿಕೊಂಡರು. ಮೂರು ದಿನಗಳ ಕಾಲ ಉರಿದ ಈ ಬೆಂಕಿಯಿಂದ ಲಂಡನ್ ನಗರ ಬಹುತೇಕ ನಾಶವಾಯಿತು.

**1752:** ಇಂಗ್ಲೆಂಡ್ ಮತ್ತು ಅದರ ವಸಾಹತುಗಳಲ್ಲಿ ಗ್ರೆಗೋರಿಯನ್ ಕ್ಯಾಲೆಂಡರ್ ಪ್ರಾರಂಭವಾಯಿತು. ಆ ಕಾರಣದಿಂದ ಸೆಪ್ಟೆಂಬರ್ 2 ನಂತರದ ದಿನವನ್ನು ಸೆಪ್ಟೆಂಬರ್ 14 ಎಂದು ಪರಿಗಣಿಸಲಾಯಿತು.

**1945:** ಜಪಾನ್ ಶರಣಾಗತಿಯಾದ ಹಿನ್ನೆಲೆಯಲ್ಲಿ ದ್ವಿತೀಯ ಮಹಾಯುದ್ಧ ಅಂತ್ಯ ಕಂಡಿತು. ಟೋಕಿಯೋ ಬೇಯ್‌ನಲ್ಲಿ ಅಮೆರಿಕಾದ ಯುದ್ಧ ನೌಕೆಯಲ್ಲಿ ಶರಣಾಗತಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

**1969:** ಇಂಟರ್‌ನೆಟ್‌ನ ಮುನ್ನುಡಿ ಎಂದು ಪರಿಗಣಿಸಲಾಯಿತು.

**1970:** ಪ್ರಥಮ ಬಾರಿಗೆ ರೈಲ್ವೆ ಹಡಗು ಸೇವೆ ಯುನೈಟೆಡ್ ಕಿಂಗ್ ಡಮ್‌ನಲ್ಲಿ ಪ್ರಾರಂಭವಾಯಿತು.

**1998:** ಗೂಗಲ್ ಕಂಪನಿಯು ಅಧಿಕೃತವಾಗಿ ಸ್ಥಾಪನೆಯಾಯಿತು.

#### ಜನನ

**1838:** ರಾಮಕೃಷ್ಣ ಗೋಪಾಲ ಭಂಡಾಕರ್, ಭಾರತೀಯ ಇತಿಹಾಸಕಾರ ಮತ್ತು ಸಮಾಜ ಸೇವಕ

**1905:** ಅಮೃತಲಾಲ್ ನಾಗರ್ದಾಸ್ ಠಾಕರ್, ಭಾರತೀಯ ಸಾಮಾಜಿಕ ಸುಧಾರಕ

**1912:** ಎ. ಶಂಕರಲಾಲ್ ಶ್ರಾಫ್, ಜೈನ ಸಮಾಜ ಸೇವಕ

**1929:** ಮಾಲ್ಕಮ್ ಬ್ರೌನ್, ಅಮೆರಿಕನ್ ಪತ್ರಕರ್ತ

**1948:** ಕ್ರಿಸ್ತಾ ಮ್ಯಾಕ್ ಆಲಿಫ್, ಅಮೆರಿಕನ್ ಶಿಕ್ಷಕಿ, 1986ರಲ್ಲಿ ಚಾಲೆಂಜರ್ ಸ್ಪೇಸ್ ಶಟಲ್ ದುರಂತದಲ್ಲಿ ಮೃತಪಟ್ಟರು.

#### ಮರಣ

**1877:** ಋಷಿ ದಯಾನಂದ ಸರಸ್ವತಿಯವರ ಶಿಷ್ಯ ಸ್ವಾಮಿ ವರ್ಧಮಾನಾನಂದ ಸರಸ್ವತಿ ನಿಧನ

**1973:** ಜೆ.ಆರ್.ಆರ್. ಟಾಲ್ಕಿನ್, ಪ್ರಸಿದ್ಧ ಇಂಗ್ಲಿಷ್ ಕಾದಂಬರಿಕಾರ

**1994:** ಶಂಕರ ದಯಾಳ್ ಶರ್ಮಾ, ಭಾರತದ 9ನೇ ರಾಷ್ಟ್ರಪತಿ

**2001:** ಕ್ರಿಸ್ತಿಯನ್ ಬಾರ್ನಾರ್ಡ್, ಹೃದಯ ಬದಲಾವಣೆ ಶಸ್ತ್ರಚಿಕಿತ್ಸೆಯಲ್ಲಿ ಪೈಲ್ವಾನ್ ಆದ ದಕ್ಷಿಣ ಆಫ್ರಿಕಾ ಶಸ್ತ್ರತಜ್ಞ


## ಕಳೆದುಕೊಂಡ ಮೇಲೆ ಹುಡುಕಬೇಡಿ



- ಚೇತನ್ ಗುರೂಜಿ, ಬಸವ ಯೋಗ ಕೇಂದ್ರ, ಅಡಗೂರು

ಭಾರತೀಯರಾದ ನಾವು ಯಾವಾಗಲೂ ಮಾಡುವ ಒಂದು ದೊಡ್ಡ ತಪ್ಪು ಎಂದರೆ ಕಳೆದುಕೊಂಡಾಗ ಹುಡುಕಿಕೊಳ್ಳುವ ಮನಸ್ಥಿತಿಯನ್ನು ನಮ್ಮ ರಕ್ತದಲ್ಲೇ ತಂದುಕೊಂಡಿದ್ದೇವೋ ಏನೋ ಗೊತ್ತಿಲ್ಲ ಅಥವಾ ಎಲ್ಲವೂ ಚೆನ್ನಾಗಿದೆಯಲ್ಲ ಮುಂದೆ ತೊಂದರೆಯಾದಾಗ ನೋಡೋಣ ಎನ್ನುವಂತಹ ನಿರ್ಲಕ್ಷ್ಯ ಭಾವನೆಯನ್ನು ತಾಳುತ್ತಿದ್ದೇವೋ ಅರ್ಥವಾಗುತ್ತಿಲ್ಲ.

ಹೇಳಲಿಕ್ಕೆ ಹೊರಟಿರುವುದು ಆರೋಗ್ಯ ವಿಚಾರದಲ್ಲಿ ಅಷ್ಟೇಯಲ್ಲ ಪ್ರತಿಯೊಂದು ಕ್ಷೇತ್ರದಲ್ಲಿರುವ ವ್ಯಕ್ತಿಗಳು ಇಂತಹ ತಪ್ಪುಗಳನ್ನು ಮಾಡುತ್ತಿದ್ದಾರೆ. ಪ್ರಸ್ತುತ ಘಟನೆಗಳನ್ನು ನೋಡುತ್ತಿದ್ದಾಗ ಅನ್ನಿಸೋದುಂಟು ಅನೇಕ ಕ್ಷೇತ್ರಗಳಲ್ಲಿ ಎಡವಿದ ವ್ಯಕ್ತಿಯ ಜೀವನಾನುಭವವನ್ನು ತಿಳಿದುಕೊಂಡರು. ಅದೇ ತಪ್ಪುಗಳನ್ನು ಮಾಡುತ್ತೇವೆ. ನಾವಂದುಕೊಳ್ಳುವುದು ಅವನ ನಿರಾಸಕ್ತಿಯೇ ಸೋಲಿಗೆ ಕಾರಣ ನಾವು ಅಂತ ತಪ್ಪು ಮಾಡುವುದಿಲ್ಲ ಎಂದು ಹೇಳಿ ಅರಿವಿಲ್ಲದೆ ಮತ್ತೆ ನಾವು ಸಹ ಅಂತಹ ತಪ್ಪುಗಳನ್ನು ಮಾಡುವುದು. ಒಂದು ಚಲನಚಿತ್ರದಲ್ಲಿ ನಟಿಸಿದ ನಟ ಅಥವಾ ನಟಿ ಆ ಸಿನಿಮಾದಿಂದ ಬಹಳಷ್ಟು ಯಶಸ್ಸು ಪ್ರಶಸ್ತಿ ಹಣ ಎಲ್ಲವನ್ನು ಪಡೆದುಕೊಳ್ಳುತ್ತಾರೆ. ಅದನ್ನೇ ತಲೆಗೇರಿಸಿಕೊಂಡು ನಂತರ ದಿನದಲ್ಲಿ ಮುಗ್ಗರಸಿ ಬಿದ್ದು ಹೇಳ ಹೆಸರಿಲ್ಲದಂತೆ ಕಾಣೆಯಾದವರನ್ನು ನೋಡುತ್ತೇವೆ. ಸುಮ್ಮನೆ ನಿಮಗೆ ಅರ್ಥವಾಗಲಿ ಎಂದು ಉದಾಹರಣೆ ಕೊಟ್ಟಿದ್ದು ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಎಡವಿರುವ ವ್ಯಕ್ತಿಗಳನ್ನು ನೋಡುತ್ತೇವೆ. ಅಲ್ಲಿ ಕಳೆದುಕೊಂಡ ಯಶಸ್ಸು ಕೀರ್ತಿ ಅಂತಸ್ತು ಕೆಲವೇ ವರ್ಷಗಳಲ್ಲಿ ಮತ್ತೆ ಸಂಪಾದಿಸಲು ಅವಕಾಶವಿರುತ್ತದೆ. ಆರೋಗ್ಯ ಕ್ಷೇತ್ರದಲ್ಲಿ ಅಂತಹ ಅವಕಾಶಗಳು ಬಹಳ ಕಡಿಮೆಯೆಂಬುದನ್ನು ತಿಳಿದು ಜಾಗ್ರತಿ ವಹಿಸಿದರೆ ಒಳ್ಳೆಯದಾಗುತ್ತದೆ. ಇಲ್ಲವಾದರೆ ತೊಂದರೆಗಳನ್ನು ಸ್ವತಹ ಅನುಭವಿಸುವುದು ಮತ್ತು ನಿಮ್ಮ ನಂಬಿರುವ ಕುಟುಂಬಗಳಿಗೆ ದುಃಖವನ್ನು ಕೊಡುವುದು ಗ್ಯಾರಂಟಿ.




ಬಹಳಷ್ಟು ಜನರಿಗೆ ಆರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಬಾರದೆಂಬ ಜ್ಞಾನವಿರಬೇಕು. ಅಲ್ಲದೆ ದೀರ್ಘ ಕಾಯಿಲೆಗಳು ಬರುವುದಕ್ಕಿಂತ ಮುಂಚೆ ಸಣ್ಣ ಮುನ್ಸೂಚನೆಯನ್ನು ತೋರಿಸುತ್ತದೆ. ಕ್ಯಾನ್ಸರ್, ಪಾರ್ಶ್ವ ವಾಯು, ಹೃದಯಾಘಾತ, ಅಧಿಕ ರಕ್ತದೊತ್ತಡ, ಸಕ್ಕರೆ ಕಾಯಿಲೆ ಹೀಗೆ ಅನೇಕ ತೊಂದರೆಗಳು ಬರುವ ಸಾಧ್ಯತೆ ಇದ್ದರೆ ದೇಹದ ಚಟುವಟಿಕೆಯಲ್ಲಿ ವ್ಯತ್ಯಾಸಗಳು ಅನೇಕ ರೂಪದಲ್ಲಿ ಆಯಾ ಕಾಯಿಲೆಗೆ ಸಂಬಂಧಿಸಿದಂತೆ ವ್ಯಕ್ತವಾಗುತ್ತವೆ. ನಾವುಗಳು ಏನೋ ವಾತಾವರಣದ ಬದಲಾವಣೆ ಆಹಾರದ ಏರುಪೇರು ಹೀಗೆ ನಮಗೆ ನಾವೇ ಅನೇಕ ಕಾರಣಗಳನ್ನು ಕೊಡುತ್ತಾ ಸುಮ್ಮನಾಗುತ್ತೇವೆ. ಮುಂದೆ ಆಗುವಂತಹ ದೊಡ್ಡ ಅನಾಹುತಗಳಿಗೆ ತುತ್ತಾಗುವುದು ನಾವೇ ಎಂಬ ಜ್ಞಾನವೇ ಇಲ್ಲದಂತೆ ಇದ್ದು ಬಿಡುತ್ತೇವೆ. ಅನುಭವದಲ್ಲಿ ಹೇಳುವುದಾದರೆ ಆರೋಗ್ಯ ಶಿಬಿರಕ್ಕೆ ಬಂದ ಒಬ್ಬರು ಕೆಲವು ವರ್ಷ ಸಂಪರ್ಕದಲ್ಲಿದ್ದು ನಂತರದಲ್ಲಿ ಆರ್ಥಿಕ ಸಬಲರಾದಂತೆ ದೇಹದ ಕಡೆ ಗಮನಕೊಡದೆ ದುಡಿಮೆಗೆ ಹೆಚ್ಚು ಒತ್ತುಕೊಟ್ಟುತ್ತಾ ಕೆಲವು ಸಾರಿ ಫೋನ್ ಮಾಡಿದರು ಮಾತನಾಡಲು ಸಮಯವಿಲ್ಲದೆ ಇದ್ದುಬಿಟ್ಟರು. ಹೀಗೆ ಕೆಲವು ವರ್ಷಗಳು ಕಳೆದ ನಂತರ ಸಿಕ್ಕಿದಾಗ ಗುರೂಜಿ ಯಾಕೋ ಎದೆ ಉರಿಯುತ್ತದೆ. ಅಲ್ಲದೆ ಅಜೀರ್ಣದ ತೊಂದರೆ ಇರಬಹುದು ಮತ್ತು ಉಸಿರಾಟ ಮಾಡಲು ಕಷ್ಟವಾಗುತ್ತಿದೆ ಎಂದು ಹೇಳಿ ಸ್ವಲ್ಪ ದಿನದಲ್ಲೇ ನಿಮ್ಮ ಮನೆಗೆ ಬಂದು ಮಾಹಿತಿ ಪಡೆದುಕೊಂಡು ಬರುತ್ತೇನೆಂದು ತಿಳಿಸಿ ಆರು ತಿಂಗಳಾದರೂ ಬರಲಿಲ್ಲ. ನಂತರ ನೆನಪಾಗಿ ಸ್ವತಹ ಫೋನ್ ಮಾಡಿದರು ರಿಸೀವ್ ಮಾಡಲಿಲ್ಲ. ಮಾರನೆಯ ದಿನ ಆತ್ಮೀಯರು ಫೋನ್ ಮಾಡಿ ಅವರು ಹೃದಯಘಾತದಿಂದ ತೀರಿಕೊಂಡರೆಂದು ಹೇಳಿದಾಗ ಒಂದು ಕ್ಷಣ ಮನಸ್ಸಿನಲ್ಲಿ ಬಂದಿದ್ದು ದೇವರು ಅವರೇ ತಿಳಿಸಿದಂತೆ ಮುಂಜಾಗ್ರತೆ ವಹಿಸುವ ಮುನ್ಸೂಚನೆ ಕೊಟ್ಟರು ಕೈಯಾರೆ ಸಾವನ್ನು ತಂದುಕೊಳ್ಳುತ್ತೇವೆನೋ ಅನ್ನಿಸಿತು. ಇಂತಹ ಅನೇಕ ಘಟನೆಗಳನ್ನು ಸಾಕಷ್ಟು ತಿಳಿಸುತ್ತಾ ಹೋಗಬಹುದು. ನಿಮಗೆ ಗೊತ್ತಾಗಿದ್ದು ನಮಗೆ ಏಕೆ ಗೊತ್ತಾಗುವುದಿಲ್ಲ ಎಂಬ ಪ್ರಶ್ನೆ ಮೂಡಬಹುದು. ಕಾರಣವೆಂದರೆ ಬಸವಣ್ಣನವರ ವಚನದಲ್ಲಿ ಹೇಳಿರುವಂತೆ ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆ ಇಲ್ಲ ಅಂದರೆ ದುಡಿಮೆಗೆ ಸಮಯವಿದೆ. ನಿಸರ್ಗ ಕೊಟ್ಟ ಈ ದೇಹವೆಂಬ ಲಿಂಗವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ದಿನದ ಒಂದಿಷ್ಟು ಸಮಯವನ್ನು ಮೀಸಲಿಡಬೇಕೆಂಬ ತಿಳಿವಳಿಕೆ ಬಂದರೆ ಇವತ್ತಿನ ದಿನಮಾನದಲ್ಲಿ ಅವನೇ ದೊಡ್ಡ ಬುದ್ಧಿವಂತನೆಂದು ಹೇಳಬಹುದು. ಇನ್ನೊಂದು ವಚನದ ಸಾಲಿನಲ್ಲಿ ಷಣ್ಮುಖ ಶಿವಯೋಗಿಗಳು ಹೇಳಿರುವಂತೆ ಕನಕ, ಕಾಮಿನಿ, ಕಾಂಚನಕ್ಕಾಗಿ ಹೊಡೆದಾಡಿ ಕೆಟ್ಟಿತಿ ಲೋಕವೆಲ್ಲ, ಬರೀ ಇಷ್ಟಕ್ಕೆ ಬಡಿದಾಡಿ ಜೀವನವನ್ನು ಮುಗಿಸಿಬಿಡುವುದಲ್ಲವೆಂಬ ಪರಿಜ್ಞಾನ ಇದ್ದಿದ್ದರಿಂದಲೇ ಸಾವಿರಾರು ವರ್ಷಗಳಿಂದ ಮನುಷ್ಯ ಜನಾಂಗ ಇಲ್ಲಿಯ ತನಕ ಇರಲು ಸಾಧ್ಯವಾಗಿದೆ. ಅವರೇನಾದರೂ ಈಗಿನಂಗೆ ಪ್ರಕೃತಿಯ ಸರ್ವನಾಶ ಮಾಡುತ್ತಾ ಬಂದಿದ್ದರೆ ಬಹಳ ಕಷ್ಟವಾಗುತ್ತಿತ್ತು. ಮುಂದಿನ ಪೀಳಿಗೆ ಉಳಿಯಬೇಕು ಬೆಳೆಯಬೇಕು ಅನುಭವಿಸಬೇಕು ಎಂಬುದಷ್ಟೇ ಅವರ ಆಸೆ ಇತ್ತೆ ಹೊರತು ದುರಾಸೆ ಇರಲಿಲ್ಲ.

ಒಬ್ಬರು ಒಂದು ಮಾತು ಹೇಳಿದ್ದಾರೆ ಮನುಷ್ಯನಿಗೆ ಮಣ್ಣಿನ ಮೇಲಾಸೆ, ಮಣ್ಣಿಗೆ ಮನುಷ್ಯನ ಮೇಲಾಸೆ, ಕೊನೆಗೆ ಗೆಲ್ಲುವುದು ಮಣ್ಣೇ ಹೊರತು ಮನುಷ್ಯನಲ್ಲ ಎಂಬ ಸತ್ಯದ ಅರಿವನ್ನು ಅರಿತು ಬಾಳಲು ಆರೋಗ್ಯಕ್ಕೆ ಮಹತ್ವವನ್ನು ಕೊಡುವುದನ್ನು ಈ ಲೇಖನ ಓದಿದ ಮೇಲಾದರೂ ಬದಲಾವಣೆ ಮಾಡಿಕೊಂಡರೆ ಖಂಡಿತ ನೀವು ಮತ್ತು ನಂಬಿರುವ ಕುಟುಂಬ ಸಂತೋಷದಿಂದಿರಲು ಸಾಧ್ಯವಾಗುತ್ತದೆ. ಕಾರಣ ಆರೋಗ್ಯ ಕೆಡಿಸಿಕೊಂಡ ವ್ಯಕ್ತಿ ಮತ್ತು ಅವರ ಕುಟುಂಬವನ್ನು ಒಮ್ಮೆ ಭೇಟಿಯಾಗಿ ಮಾತನಾಡಿಸಿ ಆಗ ಅರ್ಥವಾಗುತ್ತದೆ ಕಳೆದುಕೊಂಡು ಹುಡುಕಬಾರದು ಅದು ವಾಪಸ್ ಸಿಗುವುದು ತುಂಬಾ ಕಷ್ಟ ಎಂಬ ಸತ್ಯದರ್ಶನ ವಾಗುತ್ತದೆ. ಏನಂತೀರಿ?

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248